ಆ) ಅತೀವೃಷ್ಟಿ ಬರ ಪರಿಹಾರ ಸೇರಿದಂತೆ ಒಟ್ಟು 246.50 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

ಅತೀವೃಷ್ಟಿಯಿಂದ ಹಾನಿಗೀಡಾದ ಸಾರ್ವಜನಿಕ ಆಸ್ತಿ-ಪಾಸ್ತಿ ದುರಸ್ತಿ ಜಾನುವಾರು ಹಾನಿ, ಬೆಳೆ ಹಾನಿ, ಮರಣಹೊಂದಿದವರ ವಾರಸುದಾರರಿಗೆ ಪರಿಹಾರ ನೀಡುವ ಸಲುವಾಗಿ ಬಿಡುಗಡೆ ಮಾಡಿದ ಹಣದ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

	ತಾಲ್ಲೂಕಿನ ಹೆಸರು	ಲಕ್ಷ ರೂ.ಗಳಲ್ಲಿ
1.	ರಾಯಚೂರು	9.34
2.	ಮಾನ್ವಿ	3.73
3.	ದೇವದುರ್ಗ	5.68
4.	ಲಿಂಗಸೂಗೂರು	9.84
5.	ಸಿಂಧನೂರು	4.98
6.	ಕುಷ್ಟಗಿ	4.30
7.	ಕೊಪ್ಪಳ	3.05
8.	ಗಂಗಾವತಿ	13.10
9.	ಯಲಬುರ್ಗ	6.87
10.	ಅಭಿಯಂತರರು, ಲೋಕೋಪಯೋಗಿ ಇಲಾಖೆ	10.00

ಅದಲ್ಲದೆ. ಈ ಕೆಳಕಂಡಂತೆ ಹಣವನ್ನು ಹಾನಿಗೀಡಾದ ಸಾರ್ವಜನಿಕ ಆಸ್ತಿ-ಪಾಸ್ತಿಗಳ ದುರಸ್ತಿಗಾಗಿ ವಿತರಿಸಲಾಗಿದೆ :

1.	ಸಹಾಯಕ ಆಯುಕ್ತರು, ಕೊಪ್ಪಳ	3.00 ಲಕ್ಷ
2.	ಸಹಾಯಕ ಆಯುಕ್ತರು, ರಾಯಚೂರು	3.00 ಲಕ್ಷ
3.	ಸಹಾಯಕ ಆಯುಕ್ತರು, ಲಿಂಗಸೂಗೂರು	3.00 ಲಕ್ಷ
4.	ರಾಯಚೂರು ಜಿಲ್ಲೆಯ ನಗರ ಸಭೆಗಳಿಗೆ	6.25 ಲಕ್ಷ

ಶ್ರೀಕ್ಷೇತ್ರ ಸೋಗಾಲದಲ್ಲಿ ಹಣ್ಣು ಮತ್ತು ಔಷಧ ಗಿಡಗಳನ್ನು ನೆಡುವುದು.

260 (1589) ಶ್ರೀ ಶಿವಾನಂದ್ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಪೈಕಿ ಶ್ರೀಕ್ಷೇತ್ರ ಸೋಗಾಲದಲ್ಲಿ ಆರಣ್ಯ ಬೆಳೆಸಲು ಸಾಕಷ್ಟು ಸ್ಥಳವಿದ್ದು ಅಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಲು ಹಾಗೂ ಔಷಧ ಗಿಡಗಳನ್ನು ಬೆಳೆಸಲು ಸಾರ್ವಜನಿಕರಿಂದ ಮನವಿಗಳು ಬಂದಿವೆಯೇ ;

ಆ) ಹಾಗಿದ್ದಲ್ಲಿ, ಅಲ್ಲಿ ಹಣ್ಣಿನ ಗಿಡಗಳನ್ನು ಹಾಗೂ ಔಷದ ಗಿಡಗಳನ್ನು ಬೆಳೆಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಇ) ಅತೀಕ್ರಮಣ ತಪ್ಪಿಸುವ ಸಲುವಾಗಿ ಶ್ರೀಕ್ಷೇತ್ರ ಸೊಗಲದಲ್ಲಿ ಅರಣ್ಯ ಭೂಮಿ ಕಾಪಾಡಲು ತಂತಿಯ ಬೇಲಿಯನ್ನು ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ಕ್ಷೇತ್ರದ ಸದರಿ ಭೂಮಿಯು ತೋಟಗಾರಿಕೆ ಇಲಾಖೆಯ ಅಧೀನದಲ್ಲಿ ಇಲ್ಲದಿರುವುದರಿಂದ ಈ ಇಲಾಖೆಯ ವತಿಯಿಂದ ಬೇಲಿ ಹಾಕುವ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷೆಯವರೆ, ತಾ : 12-3-92ರಂದು ಲಿಖಿತಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 27 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ : 1322, 1673, 1323, 1367, 1424, 1427, 1588, 92, 91, 1716, 1585 ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 16 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸೇಡಂ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು ವಿವಿಧ ಬಾಬುಗಳಲ್ಲಿ ಖರ್ಚು ಮಾಡಿದ ಹಣ

985 (1235) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ 1990-91 ಹಾಗೂ 1991-92ನೇ ಸಾಲಿನಿಂದ ಇಲ್ಲಿಯವರೆಗೆ ಅರಣ್ಯ ಇಲಾಖೆಯವರು ವಿವಿಧ ಬಾಬುಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು;

ಆ) 1990-91ನೇ ಸಾಲಿನಲ್ಲಿ ಈ ಅರಣ್ಯದಿಂದ ಬಂದಿರುವ ಆದಾಯವೆಷ್ಟು?

ಇ) 1990-91ನೇ ಹಾಗೂ 1991-92ನೇ ಸಾಲಿನಲ್ಲಿ ಅರಣ್ಯ ಇಲಾಖೆಯವರು ಮಾಡಿರುವ ಒಟ್ಟು ನರ್ಸರಿಗಳೆಷ್ಟು;

ಈ) 1990-91ನೇ ಸಾಲಿನಲ್ಲಿ ಯಾವ ಅರಣ್ಯಗಳಲ್ಲಿ ಯಾವ ಯಾವ ಸರ್ವೆ ನಂಬರುಗಳಲ್ಲಿ ಸಸಿಗಳನ್ನು ನೆಡಲಾಗಿದೆ;

ಉ) ಈಗ ಅವು ಯಾವ ಹಂತದಲ್ಲಿ ಬೆಳೆದಿದೇ?

ಊ) ವಿವಿಧ ನರ್ಸರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಹಾಗೂ ಪುರುಷ ಕೂಲಿಕಾರರ ಸಂಖ್ಯೆ ಎಷ್ಟು: ಅವರ ಹೆಸರುಗಳೇನು ಹಾಗೂ ಅವರಿಗೆ ಕೊಡುವ ದಿನಗೂಲಿ ಎಷ್ಟು?